# ಈ ಪರಿಯ ಪ್ರಾಣಿ ಪ್ರೀತಿ

ವಿದೇಶೀಯರಲ್ಲಿ ಒಬ್ಬೊಬ್ಬರದ್ದು ಒಂದೊಂದು ಹವ್ಯಾಸ, ಪ್ರೀತಿ, ಆಸಕ್ತಿ. ಕೆಲವರಿಗೆ ಊರು ಸುತ್ತುವ ಹವ್ಯಾಸ ಇಷ್ಟವಾದರೆ ಮತ್ತೆ ಕೆಲವರಿಗೆ ತಿಂಡಿ, ಊಟ ರುಚಿ ನೋಡುವಾಸೆ. ಇನ್ನೂ ಕೆಲವರಿಗೆ ಸಾಕು ಪ್ರಾಣಿಗಳನ್ನು ಮುದ್ದಿಸುವ ಪ್ರೀತಿ. ಹವ್ಯಾಸ. ಜರ್ಮನಿಯಿಂದ ಬಂದ ಆಂಡ್ರಿಯಾಗೆ ಪ್ರಾಣಿ ಪಕ್ಷಿಗಳೆಂದರೆ ಬಹಳ ಇಷ್ಟ. ಅಸಾಧಾರಣ ವಾತ್ಸಲ್ಯ, ಪ್ರೀತಿ.

ಆಂಡ್ರಿಯಾ ಎರಡು ವರ್ಷಗಳ ಹಿಂದೆ ಬೆಂಗಳೂರಿಗೆ ಬಂದವರು. ಇದಕ್ಕೂ ಮುನ್ನ ಆಂಡ್ರಿಯಾ ಜರ್ಮನಿಯಲ್ಲಿ ನಾಲ್ಕು ವರ್ಷ ಸಾಮಾಜಿಕ ಸಲಹೆಗಾರರಾಗಿ ಸೇವೆ ಸಲ್ಲಿಸಿದವರು. ಬೆಂಗಳೂರಿಗೆ 2014ರ ಆರಂಭದಲ್ಲಿ ಬಂದ ಆಂಡ್ರಿಯಾ ಅವರು ಇಲ್ಲಿಗೆ ಬರುವ ಮುನ್ನ ಸಾಕಷ್ಟು ಯೋಚನೆ ಮಾಡಿದ್ದರಂತೆ. ಏಕೆಂದರೆ ಅಮೆರಿಕದಿಂದ ಭಾರತಕ್ಕೆ ಬಂದು ನೆಲೆಯೂರುವುದು ಸುಲಭದ ಮಾತಲ್ಲ ಎಂಬುದನ್ನು ಅವರು ಮೊದಲೇ ಮನಗಂಡಿದ್ದರು.

ಮೂರು ಮಕ್ಕಳ ತಾಯಿಯಾಗಿರುವ ಆಂಡ್ರಿಯಾ, ಮಕ್ಕಳನ್ನು ಇಲ್ಲೇ ಶಾಲೆಗೂ ಸೇರಿಸಿದ್ದಾರೆ. ವೃತ್ತಿನಿಮಿತ್ತ ಹೆಚ್ಚಾಗಿ ಪ್ರವಾಸ ಮಾಡಬೇಕಾಗಿರುವುದರಿಂದ ಮಕ್ಕಳಿಗೆ ಇಲ್ಲಿ ಕಷ್ಟವಾಗುತ್ತದೆ ಎಂಬ ಕೊರಗು ಅವರದು.

ಹಾಗೆ ನೋಡಿದರೆ ಆಂಡ್ರಿಯಾ ಅವರ ತವರೂರು ಜರ್ಮನಿ. ಹೈಸ್ಕೂಲ್‌ವರೆಗೆ ಜರ್ಮನಿಯಲ್ಲಿ ಓದಿ ಬಳಿಕ ಬರ್ಲಿನ್‌ನಲ್ಲಿ ಹೆಚ್ಚಿನ ವಿದ್ಯಾಭ್ಯಾಸ ಮುಂದುವರೆಸಿದರು. ಅಲ್ಲಿಂದ ಜೆರುಸಲೇಂ, ಯೆಮನ್, ಅಮೆರಿಕದಲ್ಲಿ ಉನ್ನತ ಅಧ್ಯಯನ ಮಾಡಿದ್ದರು. ಅಲ್ಲೇ ಅವರಿಗೆ ಮದುವೆಯೂ ಆಯಿತು. ಮದುವೆಯ ಬಳಿಕ ಅಮೆರಿಕದಲ್ಲಿಯೂ ಕೆಲ ಕಾಲ ಇದ್ದರು.

ವಾರಾಂತ್ಯದಲ್ಲಿ ಸ್ವಿಮಿಂಗ್ ಪೂಲ್‌ನಲ್ಲಿ ಈಜಾಡುವುದು, ಮಾಲ್‌ಗಳನ್ನು ಸುತ್ತುವುದು, ಶಾಪಿಂಗ್ ಮಾಡುವುದು, ಸಿನಿಮಾ ನೋಡುವುದು, ಇವರಿಗೆ ಇಷ್ಟವಂತೆ. ಚೀನಾ ಶೈಲಿಯ ಅಡುಗೆ, ಜಪಾನಿ ಫ್ರೈಸ್, ರೋಟಿ, ನಾನ್ ಜತೆಗೆ ಚಿಕನ್ ವೈವಿಧ್ಯ ಗ್ರೇವಿಗಳನ್ನು ಬಹಳ ಇಷ್ಟಪಡುತ್ತಾರಂತೆ. ದಕ್ಷಿಣ ಭಾರತೀಯ ಶೈಲಿಯ ಅಡುಗೆಗಳನ್ನೂ ಬಹುವಾಗಿ ಪ್ರೀತಿಸುತ್ತಾರಂತೆ. ಬೆಳಗ್ಗಿನ ಉಪಾಹಾರಕ್ಕೆ ಇಡ್ಲಿ, ದೋಸೆ, ವಡೆ ತಿನ್ನುವುದು ಅಭ್ಯಾಸವಾಗಿ ಹೋಗಿದೆ. ಮನೆಯಲ್ಲೂ ದೋಸೆ, ಪಲ್ಯ ಮಾಡಿಕೊಳ್ಳುತ್ತೇನೆ. ಮಧ್ಯಾಹ್ನಕ್ಕೆ ಭರ್ಜರಿ ಊಟವೇ ಬೇಕಂತೆ. ಮಕ್ಕಳು ರಾತ್ರಿ ನೂಡಲ್ಸ್, ಚಿಕನ್ ಫ್ರೈ, ಐಸ್‌ಕ್ರೀಂ ಇಷ್ಟಪಡುತ್ತಾರಂತೆ. ಹೀಗೆ ಇಲ್ಲಿ ಸಿಗುವ ಊಟ ತಿಂಡಿಗಳ ವೈವಿಧ್ಯವನ್ನು ಬಹಳ ಕೊಂಡಾಡುತ್ತಾರೆ ಈ ಚೆಲುವೆ.

ಭಾರತದಲ್ಲಿ ಹಲವಾರು ಉತ್ತಮ ಪ್ರವಾಸಿ ತಾಣಗಳಿವೆ. ಕರ್ನಾಟಕದಲ್ಲೂ ಅನೇಕ ಮನಮೋಹಕ ಸ್ಥಳಗಳಿವೆ. ಹಂಪಿ, ಮೈಸೂರು, ಶ್ರವಣಬೆಳಗೊಳ, ಶ್ರೀರಂಗಪಟ್ಟಣಗಳನ್ನು ನೋಡಿ ಬಂದದ್ದೇವೆ. ಎಲ್ಲವೂ ಬಹಳ ಸುಂದರವಾಗಿವೆ. ಆಗ್ರಾ, ದೆಹಲಿ, ಜೈಪುರಗಳಂತಹ ಪ್ರವಾಸಿ ಜಾಗಗಳನ್ನು ನೋಡುವಾಸೆ. ಸಮಯ ಇದ್ದಾಗ ನೋಡಬೇಕು ಎಂದು ಗುರುತು ಹಾಕಿಕೊಂಡಿದ್ದೇನೆ. ಆದರೆ ಇನ್ನೂ ಸಮಯವೇ ಸಿಕ್ಕಿಲ್ಲ. ಮೇಲಾಗಿ ಕೆಲಸದ ಸಂಬಂಧ ಬೇರೆ ಬೇರೆ ಊರುಗಳಿಗೆ ಪ್ರವಾಸ ಹೋಗಬೇಕಾಗಿರುವುದರಿಂದ ವಿವಿಧ ತಾಣಗಳನ್ನು ನೋಡಲಾಗುತ್ತಿಲ್ಲ' ಎಂದು ಹೇಳುತ್ತಾರೆ ಇವರು.

'ಪ್ರಾಣಿಗಳನ್ನು ಬಹಳ ಪ್ರೀತಿಸುತ್ತೇನೆ. ಊರಿನಲ್ಲಿರುವಾಗ ಮನೆಯಲ್ಲಿ ನಾಯಿ, ಮೊಲ, ಆಮೆ, ಮೀನುಗಳನ್ನು ಸಾಕುತ್ತಿದ್ದೆವು. ಕೋಳಿಗಳನ್ನೂ ಸಾಕಬೇಕು ಎನ್ನುವ ಆಸೆ ಇತ್ತು. ಆದರೆ ಅದು ಕೈಗೂಡಲೇ ಇಲ್ಲ. ಮನೆಯಲ್ಲಿ ಸಾಕು ಪ್ರಾಣಿಗಳಿಂದ ಸಿಗುವ ಪ್ರೀತಿ ಇನ್ನು ಯಾವುದರಿಂದಲೂ ಸಿಗಲು ಸಾಧ್ಯವಿಲ್ಲ ಎಂಬ ನಂಬಿಕೆ ನನ್ನದು. ಇಲ್ಲಿ ಕೋಳಿ, ನಾಯಿ, ಬೆಕ್ಕು ಕಾಣಲು ಸಿಕ್ಕಿದಾಗಲೆಲ್ಲ ಮುದ್ದು ಮಾಡುತ್ತೇನೆ. ಮಕ್ಕಳೂ ಬಹಳ ಇಷ್ಟಪಡುತ್ತಾರೆ. ಇಲ್ಲಿನ ಪಂಚತಾರ ಹೋಟೆಲ್ ಒಂದರಲ್ಲಿ ಗಿರಿರಾಜ ಕೋಳಿಗಳನ್ನು ಕಂಡು ಬಹಳ ಖುಷಿಪಟ್ಟೆ. ಅವುಗಳೊಂದಿಗೆ ಫೋಟೊವನ್ನೂ ಕ್ಲಿಕ್ಕಿಸಿಕೊಂಡೆ. ಇಂಥ ಸಂದರ್ಭ ಒದಗಿ ಬರುವುದು ಬಹಳ ಅಪರೂಪ' ಎಂದು ತಮ್ಮ 'ಪ್ರಾಣಿ ಪ್ರೀತಿ'ಯನ್ನು ವ್ಯಕ್ತಪಡಿಸುತ್ತಾರೆ.



ಜರ್ಮನಿಯಿಂದ ಬಂದ ಆಂಡ್ರಿಯಾ ಚಿತ್ರ: ಎಸ್.ಕೆ. ದಿನೇಶ್

'ಇಲ್ಲಿಗೆ ಬಂದು ಮೂರು ವರ್ಷವಾಯಿತು. ಜರ್ಮನಿಯಿಂದ ಪ್ರಾಜೆಕ್ಟ್ ಒಂದನ್ನು ಮುಗಿಸುವ ಸಲುವಾಗಿ ಇಲ್ಲಿಗೆ ಬಂದೆ. ಈ ವರ್ಷ ಪ್ರಾಜೆಕ್ಟ್ ಮುಗಿದ ಕೂಡಲೇ ಮತ್ತೆ ವಾಪಸ್ ಹೋಗುತ್ತೇನೆ. ಆದರೆ ಮತ್ತೆ ಅವಕಾಶ ಸಿಕ್ಕಿದರೆ ಖಂಡಿತಾ ಇಲ್ಲಿಗೆ ಬರುತ್ತೇನೆ' ಎಂದು ಹೇಳುತ್ತಾರೆ ಇವರು.

★ **ಅವನೀಶ್**